Teachingninja.in

Latest Govt Job updates

Private Job updates

Free Mock tests available

Visit - teachingninja.in

# KPSC
# GPSTR

## Previous Year Paper
### (Social Science)
### 2017

Teachingninja.in

# GPSTR-2017 (SS)

**EXAMINATION CODE : 02 A**

| ನೋಂದಣಿ ಸಂಖ್ಯೆ/Registration No. | ಪ್ರಶ್ನೆಪುಸ್ತಿಕೆ ಕ್ರಮಸಂಖ್ಯೆ/ Booklet Series | ಪ್ರಶ್ನೆ ಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ / Question Booklet Sl. No. |
|---|---|---|
| | C | 7509759 |

## ಪ್ರಶ್ನೆ ಪತ್ರಿಕೆ ಪುಸ್ತಿಕೆ – ಪತ್ರಿಕೆ–2

(ಪ್ರಶ್ನೆ ಪತ್ರಿಕೆ ಪುಸ್ತಿಕೆಯಲ್ಲಿ ನೀಡಲಾಗಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಿ)

ವಿಷಯ : ಸಮಾಜ ಪಾಠಗಳು

| | | | | | |
|---|---|---|---|---|---|
| Maximum Marks : ಗರಿಷ್ಠ ಅಂಕಗಳು : | 150 | Maximum Time : ಗರಿಷ್ಠ ಅವಧಿ: : | 3.00 Hours ಗಂಟೆಗಳು | Duration : ಪರೀಕ್ಷಾ ಅವಧಿ: : | 10.00 A.M. to 01.00 P.M. |

### ಅಭ್ಯರ್ಥಿಗಳಿಗೆ ಸೂಚನೆಗಳು

1. ನೀವು ಪಡೆದಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯು 50 ಬಹುಆಯ್ಕೆ ಪ್ರಶ್ನೆಗಳು ಮತ್ತು 100 ಅಂಕಗಳ 41 ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಿದೆ. ಓ.ಎಂ.ಆರ್. ಉತ್ತರ ಹಾಳೆಯನ್ನು ಪ್ರಶ್ನೆಪತ್ರಿಕೆಯ ಒಳಭಾಗದಲ್ಲಿ ಇಡಲಾಗಿದೆ. ಪ್ರಶ್ನೆಸಂಖ್ಯೆ 1 ರಿಂದ 50 ರವರೆಗೆ 1 ಅಂಕ, ಪ್ರಶ್ನೆಸಂಖ್ಯೆ 51 ರಿಂದ 73 ರವರೆಗೆ 2 ಅಂಕಗಳು ಮತ್ತು ಪ್ರಶ್ನೆಸಂಖ್ಯೆ 74 ರಿಂದ 91 ರವರೆಗೆ 3 ಅಂಕಗಳನ್ನು ನಿಗದಿಪಡಿಸಿದೆ.
2. ಪ್ರಶ್ನೆಗಳು ಆಂಗ್ಲ ಹಾಗೂ ಕನ್ನಡ ಭಾಷೆಗಳೆರಡರಲ್ಲೂ ಮುದ್ರಿತವಾಗಿವೆ ಒಂದು ವೇಳೆ ಪ್ರಶ್ನೆಪತ್ರಿಕೆಯಲ್ಲಿ ವ್ಯತ್ಯಾಸವಿದ್ದಲ್ಲಿ, ಆಂಗ್ಲ ಮಾಧ್ಯಮದಲ್ಲಿರುವ ಪ್ರಶ್ನೆಗಳು ಸಮರ್ಪಕವಾಗಿರುತ್ತವೆ
3. ಪ್ರಶ್ನೆಪತ್ರಿಕೆಯ ಸೀಲನ್ನು ಅತೀ ಜಾಗರೂಕತೆಯಿಂದ ಬಿಡಿಸಿ, ಪ್ರಶ್ನೆ ಪತ್ರಿಕೆ ಪುಸ್ತಿಕೆಯಿಂದ ಓ.ಎಂ.ಆರ್. ಉತ್ತರ ಹಾಳೆಯನ್ನು ಹೊರತೆಗೆದು, ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಕ್ರಮಸಂಖ್ಯೆ 1 ರಿಂದ 11 ರವರೆಗಿನ ಸಾಮಾನ್ಯ ಮಾಹಿತಿಯನ್ನು ಭರ್ತಿ ಮಾಡುವುದು. ಆಂಗ್ಲ ಭಾಷಾ ಅಕ್ಷರ ಮತ್ತು ಸಂಜ್ಞೆಗಳನ್ನು ಸೂಚನೆಯಂತೆ ಭರ್ತಿ ಮಾಡದಿದ್ದಲ್ಲಿ, ನಿಮ್ಮ ಸ್ಕೋರಿಂಗ್‌ನಲ್ಲಿ ಉದ್ಭವಿಸುವ ಆಗು–ಹೋಗುಗಳಿಗೆ ವೈಯಕ್ತಿಕವಾಗಿ ನೀವೇ ಹೊಣೆಗಾರರಾಗಿರುತ್ತೀರಿ.
4. ಓ.ಎಂ.ಆರ್. ಉತ್ತರ ಹಾಳೆಯಲ್ಲಿನ ಕ್ರಮಸಂಖ್ಯೆ 5ರಲ್ಲಿ ಪ್ರಶ್ನೆಪತ್ರಿಕೆ ಪುಸ್ತಿಕೆಯ ಕ್ರಮಸಂಖ್ಯೆಯನ್ನು ನಮೂದಿಸುವುದು. ಪ್ರಶ್ನೆ ಪತ್ರಿಕೆ ಪುಸ್ತಿಕೆಯ ಸರಣಿ ಅಕ್ಷರವನ್ನು ಕ್ರಮಸಂಖ್ಯೆ 3ರಲ್ಲಿ ಹಾಗೂ ಕ್ರಮಸಂಖ್ಯೆ 11ರಲ್ಲಿ ವಿಷಯ/ಹುದ್ದೆ ಕೋಡ್ (ಸಂಕೇತ)ವನ್ನು ನಮೂದಿಸಿ ಮತ್ತು ಇವುಗಳಿಗೆ ಸಂಬಂಧಿಸಿದ ಹೆಸರಿನ ಪಕ್ಕದಲ್ಲಿರುವ ಚೌಕವನ್ನು ಶೇಡ್ ಮಾಡುವುದು.
5. ಪರೀಕ್ಷಾ ಸಮಯದಲ್ಲಿ : ಪ್ರತಿ ಪ್ರಶ್ನೆಯನ್ನು ಜಾಗರೂಕತೆಯಿಂದ ಓದಿ.
   (ಅ) ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.
   (ಆ) ಓ.ಎಂ.ಆರ್. ಉತ್ತರ ಹಾಳೆಯಲ್ಲಿನ ಪ್ರಶ್ನೆ ಸಂಖ್ಯೆಗೆ ಎದುರಾಗಿ ಸೂಕ್ತ ಅಂಡಾಕೃತಿಯನ್ನು ಸಂಪೂರ್ಣವಾಗಿ ಷೇಡಿಂಗ್ ಮಾಡುವುದು ಉದಾಹರಣೆಗೆ, ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಸಂಖ್ಯೆ 20ಕ್ಕೆ 'C' ಸರಿಯಾದ ಉತ್ತರವಾಗಿದ್ದಲ್ಲಿ, ಓ.ಎಂ.ಆರ್. ಉತ್ತರ ಹಾಳೆಯಲ್ಲಿ 'C' ಅಂಡಾಕೃತಿಯನ್ನು ನೀಲಿ/ಕಪ್ಪು ಶಾಹಿಯ ಬಾಲ್ ಪಾಯಿಂಟ್ ಪೆನ್ನನ್ನು ಉಪಯೋಗಿಸಿ ಕೆಳಕಂಡಂತೆ ಷೇಡಿಂಗ್ ಮಾಡುವುದು

   20. (a) (b) ● (d) (ಉದಾಹರಣೆಗೆ ಮಾತ್ರ)
6. ಕಚ್ಚಾ ಕಾರ್ಯವನ್ನು (Rough Work) ಪ್ರಶ್ನೆಪತ್ರಿಕೆ ಪುಸ್ತಿಕೆಯಲ್ಲಿ ಒದಗಿಸಿರುವ ಖಾಲಿ ಸ್ಥಳದಲ್ಲಿ ಮಾತ್ರ ಮಾಡತಕ್ಕದ್ದು. ಕಚ್ಚಾ ಕಾರ್ಯವನ್ನು ಯಾವುದೇ ಕಾರಣಕ್ಕೂ ಓ.ಎಂ.ಆರ್. ಉತ್ತರ ಹಾಳೆಯ ಮೇಲೆ ಮಾಡಬಾರದು.
7. ಕೊಟ್ಟಿರುವ ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಅಂಡಾಕೃತಿಗಳಿಗೆ ಷೇಡಿಂಗ್ ಮಾಡಿದ್ದಲ್ಲಿ, ಅಂತಹ ಉತ್ತರಗಳನ್ನು ತಪ್ಪು ಎಂದು ಪರಿಗಣಿಸಿ ಯಾವುದೇ ಅಂಕಗಳನ್ನು ನೀಡುವುದಿಲ್ಲ. ಓ.ಎಂ.ಆರ್. ಉತ್ತರ ಹಾಳೆಯಲ್ಲಿನ ಉದಾಹರಣೆಯನ್ನು ಗಮನಿಸಿ.
8. ಅಭ್ಯರ್ಥಿಗಳು ಮತ್ತು ಕೊಠಡಿ ಮೇಲ್ವಿಚಾರಕರು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ನಿಗದಿಪಡಿಸಿದ ಜಾಗದಲ್ಲಿ ಸಹಿ ಮಾಡುವುದು. ಅಭ್ಯರ್ಥಿಯು ತನ್ನ ಎಡಗೈ ಹೆಬ್ಬೆರಳಿನ ಮುದ್ರೆಯನ್ನು ನಿಗದಿಪಡಿಸಿದ ಜಾಗದಲ್ಲಿ ಕಡ್ಡಾಯವಾಗಿ ಹಾಕುವುದು. <u>ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಸರಿಪಡಿಸುವ ಪೆನ್ನಿನ (ವೈಟ್ನರ್) ಬಳಕೆ ಮಾಡಲು/ತಿದ್ದುಪಡಿಗಳಿಗೆ ಅವಕಾಶವಿರುವುದಿಲ್ಲ.</u>
9. ಅಭ್ಯರ್ಥಿಗಳಿಗೆ ಮೂಲ ಓ.ಎಂ.ಆರ್. ಉತ್ತರ ಹಾಳೆಯೊಂದಿಗೆ ಕಾರ್ಬನ್‌ರಹಿತ ಓ.ಎಂ.ಆರ್. ಉತ್ತರ ಹಾಳೆಯನ್ನೂ ನೀಡಲಾಗಿದೆ. ಪರೀಕ್ಷೆಯ ಬಳಿಕ ಅಭ್ಯರ್ಥಿಯು ಮೂಲ ಓ.ಎಂ.ಆರ್. ಉತ್ತರ ಹಾಳೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಹಿಂದಿರುಗಿಸತಕ್ಕದ್ದು ಹಾಗೂ ಕಾರ್ಬನ್‌ರಹಿತ ಪ್ರತಿಯನ್ನು ಅಭ್ಯರ್ಥಿಯೇ ಇಟ್ಟುಕೊಳ್ಳುವುದು.
10. ಬಹುಆಯ್ಕೆ ಆಧಾರಿತ ಪ್ರಶ್ನೆಗಳನ್ನು ಉತ್ತರಿಸಲು ಒಂದು ಗಂಟೆ ಕಾಲಾವಕಾಶವನ್ನು ನೀಡಲಾಗಿದೆ (ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ). ಉತ್ತರಿಸಿದ ಓ.ಎಂ.ಆರ್. ಉತ್ತರ ಹಾಳೆಗಳನ್ನು ಬೆಳಿಗ್ಗೆ 11 ಗಂಟೆಗೆ ಹಿಂಪಡೆಯಲಾಗುವುದು. ವಿವರಣಾತ್ಮಕ ಉತ್ತರ ಪತ್ರಿಕೆಯನ್ನು ಮಧ್ಯಾಹ್ನ 1.00 ಗಂಟೆಗೆ ಹಿಂಪಡೆಯಲಾಗುವುದು.

### ಓ.ಎಂ.ಆರ್ ಉತ್ತರ ಹಾಳೆಯನ್ನು ಭರ್ತಿ ಮಾಡಲು ಸೂಚನೆಗಳು

(1) ಪ್ರತಿ ಪ್ರಶ್ನೆಗೂ ಒಂದೇ ಒಂದು ಸರಿಯಾದ ಉತ್ತರವಿರುತ್ತದೆ.
(2) ಅಂಡಾಕೃತಿಗಳನ್ನು <u>ನೀಲಿ ಅಥವಾ ಕಪ್ಪು</u> ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ಶೇಡ್ ಮಾಡತಕ್ಕದ್ದು. ಉತ್ತರ ಮಾರ್ಪಡಿಸಲು ಪ್ರಯತ್ನಿಸಬಾರದು.
(3) ಅಂಡಾಕೃತಿಗಳಲ್ಲಿರುವ ಅಕ್ಷರ ಕಾಣದಂತೆ ಅಂಡಾಕೃತಿಯನ್ನು ಸಂಪೂರ್ಣವಾಗಿ ಶೇಡ್ ಮಾಡುವುದು.
(4) ಓ.ಎಂ.ಆರ್. ಉತ್ತರ ಹಾಳೆಯ ಮೇಲೆ ಯಾವುದೇ ರೀತಿಯ ಗುರುತು, ಗೀಟು, ಚುಕ್ಕೆ ಅಥವಾ ಕಲೆಯನ್ನು ಮಾಡಬಾರದು.
(5) ಇದು ಕಾರ್ಬನ್‌ರಹಿತ ಉತ್ತರ ಹಾಳೆಯಾಗಿದ್ದು, ಎರಡನೇ ಪ್ರತಿಯನ್ನು ಪ್ರತ್ಯೇಕವಾಗಿ ಶೇಡ್ ಮಾಡುವ ಅಗತ್ಯ ಇರುವುದಿಲ್ಲ.

### ವಿವರಣಾತ್ಮಕ ಪರೀಕ್ಷೆಗೆ ಸೂಚನೆಗಳು

1. ಉತ್ತರ ಪುಸ್ತಿಕೆಯಲ್ಲಿ ಸ್ಪಷ್ಟವಾಗಿ ಪ್ರಶ್ನೆ ಸಂಖ್ಯೆಗಳನ್ನು ಬರೆಯಿರಿ.
2. ಒಂದೇ ಪ್ರಶ್ನೆಗೆ ಉತ್ತರವನ್ನು ಪುನರಾವರ್ತಿಸಬಾರದು.
3. ಅವಶ್ಯಕತೆ ಇರುವಲ್ಲಿ, ಚಿತ್ರಗಳು, ಕೋಷ್ಟಕಗಳು, ನಕ್ಷೆಗಳು ಮತ್ತು ಫ್ಲೋಚಾರ್ಟ್‌ಗಳನ್ನು ಬಿಡಿಸಿ.
4. ಪರೀಕ್ಷಾ ಕೊಠಡಿಯೊಳಗೆ ಕ್ಯಾಲುಕ್ಯುಲೇಟರ್ ಹಾಗೂ ಮೊಬೈಲ್‌ಫೋನ್‌ಗಳನ್ನು ಬಳಸಲು ಅವಕಾಶವಿರುವುದಿಲ್ಲ.
5. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರ (ನಕಲು) ಮಾಡುವುದು ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗಾಗಿ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹವರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮವನ್ನು ತೆಗೆದುಕೊಳ್ಳಲಾಗುವುದು.
6. ಆನ್‌ಲೈನ್ ಅರ್ಜಿಯಲ್ಲಿ ಘೋಷಿಸಿರುವಂತೆ ವಿವರಣಾತ್ಮಕ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಭಾಷೆ ಅಥವಾ ಆಂಗ್ಲ ಭಾಷೆಯಲ್ಲಿ ಬರೆಯತಕ್ಕದ್ದು.

**ENGLISH VERSION IS PROVIDED AT THE BACKSIDE OF THIS BOOKLET**

SEAL

Teachingninja.in

1. 2011 ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯಾ ಬೆಳವಣಿಗೆಯ ದರ :
(a) 17.46%
(b) 17.64%
(c) 16.64%
(d) 18.64%

1. According to 2011 census the growth rate of population in India is
(a) 17.46%
(b) 17.64%
(c) 16.64%
(d) 18.64%

2. ಮಣ್ಣಿನ ಸವೆತವು ಇದರಿಂದ ಉಂಟಾಗುತ್ತದೆ :
(a) ಅರಣ್ಯನಾಶ
(b) ಅತಿಯಾಗಿ ಮೇಯಿಸುವುದು
(c) ಅವೈಜ್ಞಾನಿಕ ಬೇಸಾಯ ಪದ್ಧತಿಗಳು
(d) ಮೇಲಿನ ಎಲ್ಲವೂ

2. Soil erosion is caused by
(a) Deforestation
(b) Over grazing
(c) Unscientific methods of cultivation
(d) All the above

3. ಹಿಮಾಲಯವು ಅತಿ ಹೆಚ್ಚಾಗಿ ಹೊಂದಿರುವುದು :
(a) ಅಲ್ಪೈನ್ ಅರಣ್ಯಗಳು
(b) ಮಾನ್ಸೂನ್ ಅರಣ್ಯಗಳು
(c) ಮ್ಯಾಂಗ್ರೋವ್ ಅರಣ್ಯಗಳು
(d) ಮೇಲಿನ ಎಲ್ಲವೂ

3. Himalayas are rich in
(a) Alpine forests
(b) Monsoon forests
(c) Mangrove forests
(d) All the above

4. ಭಾರತದ ಯಾವ ಜಲಭಾಗವು ಹೆಚ್ಚು ಚಂಡಮಾರುತಗಳನ್ನು ಸೃಷ್ಟಿಸುತ್ತದೆ?
(a) ಅರಬ್ಬೀ ಸಮುದ್ರ
(b) ಮನ್ನಾರ್ ಖಾರಿ
(c) ಕ್ಯಾಂಬೇ ಖಾರಿ
(d) ಬಂಗಾಳ ಕೊಲ್ಲಿ

4. The water bodies which form more cyclones in India
(a) The Arabian sea
(b) The Gulf of mannar
(c) The Gulf of Cambay
(d) The Bay of Bengal


Teachingninja.in

5. "ಸಮತಟ್ಟಾದ ಭೂಖಂಡ" :
(a) ಏಷ್ಯಾ
(b) ಆಫ್ರಿಕಾ
(c) ಆಸ್ಟ್ರೇಲಿಯಾ
(d) ಯುರೋಪ್

5. "Flattest continent"
(a) Asia
(b) Africa
(c) Australia
(d) Europe

6. "ಭಾರತದ ಜಾವಾ" :
(a) ಗೋರಖ್‌ಪುರ
(b) ಲಖ್ನೌ
(c) ಕಾನ್ಪುರ್
(d) ಕೊಲ್ಹಾಪುರ್

6. "JAVA of India" is
(a) Gorakpur
(b) Lucknow
(c) Kanpur
(d) Kolhapur

7. ಘಟಪ್ರಭಾ ನದಿಯು ನಿರ್ಮಿಸುವುದು :
(a) ಗೋಕಾಕ್ ಜಲಪಾತ
(b) ಅಬ್ಬಿ ಜಲಪಾತ
(c) ಮಾರ್ಬಲ್ ಜಲಪಾತ
(d) ಗಗನಚುಕ್ಕಿ ಜಲಪಾತ

7. The Ghataprabha river forms
(a) Gokak falls
(b) Abbe falls
(c) Marble falls
(d) Gagana chukki falls

8. ಕರ್ನಾಟಕದ "ಓಂ ಬೀಚ್" ಇದರ ಸಮೀಪವಿದೆ :
(a) ಮಲ್ಪೆ
(b) ಉಡುಪಿ
(c) ಗೋಕರ್ಣ
(d) ಕಾರವಾರ

8. The "Om" beach of karnataka is near
(a) Malpe
(b) Udupi
(c) Gokarna
(d) Karwar


Teachingninja.in

9. ಜೋಗ್‌ಜಲಪಾತವನ್ನು ____________ ನದಿಯು ನಿರ್ಮಿಸಿದೆ.

(a) ನೇತ್ರಾವತಿ

(b) ಕಾವೇರಿ

(c) ಕಾಳಿ

(d) ಶರಾವತಿ

9. The Jog falls in formed by ____________ river.

(a) The Netravathi

(b) The Cauvery

(c) The Kali

(d) The Sharavathi

10. "ಭಾರತದ ಹೆಬ್ಬಾಗಿಲು" :

(a) ನವ ಮಂಗಳೂರು ಬಂದರು

(b) ಪಾರಾದೀಪ್ ಬಂದರು

(c) ವಿಶಾಖಪಟ್ಟಣಂ ಬಂದರು

(d) ಮುಂಬೈ ಬಂದರು

10. "Gateway of India" is

(a) New mangaluru port

(b) Paradeep port

(c) Vishakapatnam port

(d) Mumbai port

11. ನವದೆಹಲಿಯ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಈ ಹೆಸರಿನಿಂದ ಕರೆಯುತ್ತಾರೆ :

(a) ಅಣ್ಣಾ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ

(b) ಇಂದಿರಾಗಾಂಧಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ

(c) ಸುಭಾಷ್‌ಚಂದ್ರ ಬೋಸ್ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ

(d) ಸರದಾರ್ ವಲ್ಲಭಬಾಯಿ ಪಟೇಲ್ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ

11. The International Air port of New Delhi is called

(a) Anna International air port

(b) Indira Gandhi International air port

(c) Subas Chandra Bose International airport

(d) Sardar Vallabai patel International airport



Teachingninja.in

12. ಭೂ ಮತ್ತು ಜಲರಾಶಿಗಳ ಅನುಪಾತ :

(a) 2 : 1.43
(b) 1 : 2.43
(c) 1 : 1.43
(d) 1 : 2.34

12. The ratio between land and water bodies

(a) 2 : 1.43
(b) 1 : 2.43
(c) 1 : 1.43
(d) 1 : 2.34

13. "ಪ್ರಪಂಚದ ಅತೀ ವಿಸ್ತಾರವಾದ ಮತ್ತು ಆಳವಾದ ಸಾಗರ :

(a) ಅಟ್ಲಾಂಟಿಕ್ ಸಾಗರ
(b) ಹಿಂದೂ ಮಹಾಸಾಗರ
(c) ಪೆಸಿಫಿಕ್ ಸಾಗರ
(d) ದಕ್ಷಿಣ ಸಾಗರ

13. The largest and deepest ocean in the world

(a) The Atlantic ocean
(b) The Indian ocean
(c) The Pacific ocean
(d) The Southern ocean

14. ಭೂಮಿಯ ಕೇಂದ್ರ ಗೋಳದಲ್ಲಿ ಇದು ಹೆಚ್ಚಾಗಿದೆ :

(a) ನಿಕ್ಕಲ್ ಮತ್ತು ಕಬ್ಬಿಣ
(b) ಸಿಲಿಕಾ ಮತ್ತು ಮೆಗ್ನಿಷಿಯಂ
(c) ಸಿಲಿಕಾ ಮತ್ತು ಅಲ್ಯುಮಿನಿಯಂ
(d) ನಿಕ್ಕಲ್ ಮತ್ತು ಸಿಲಿಕಾ

14. The core of the Earth is rich in

(a) Nickel and Ferrous
(b) Silica and Magnesium
(c) Silica and Aluminum
(d) Nickel and Silica

15. ಜಾಗೃತ ಜ್ವಾಲಾಮುಖಿ : ಮೌಂಟ್ ಎಟ್ನಾ : : ಸುಪ್ತ ಜ್ವಾಲಾಮುಖಿ :

(a) ಮೌಂಟ್ ಫ್ಯೂಜಿಯಾಮಾ
(b) ಮೌಂಟ್ ಸ್ಟ್ರಾಂಬೋಲಿ
(c) ಮೌಂಟ್ ಆರ್ಥರ್‌ಸೀಟ್
(d) ಮೌಂಟ್ ಪಿನಟೋಬಾ

15. Active volcano : mt Etna : Dormant volcano :

(a) mt Fujiyama
(b) mt Stromboli
(c) mt Arthurseat
(d) mt Pinatuba



Teachingninja.in

16. ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಹಾಲ್‌ಮಾರ್ಕ್ ಚಿಹ್ನೆಯನ್ನು ಬಳಸುತ್ತಾರೆ?

(a) ಕೃಷಿ ಉತ್ಪನ್ನಗಳು

(b) ಆಭರಣಗಳು

(c) ವಿದ್ಯುತ್ ಸರಕುಗಳು

(d) ಆಟೋಮೊಬೈಲ್‌ಗಳು

16. Hall mark is used as a Logo for which of the following

(a) Agriculture product

(b) Jewellery

(c) Electric goods

(d) Automobiles

17. ಇದು ಸರಕುಗಳನ್ನು ಗಾತ್ರ, ಗುಣಮಟ್ಟ ಮತ್ತು ಬಣ್ಣಗಳ ಆಧಾರದ ಮೇಲೆ ವಿವಿಧ ಗುಂಪುಗಳಾಗಿ ವಿಂಗಡಿಸುವ ಪ್ರಕ್ರಿಯೆಯಾಗಿದೆ :

(a) ಮುದ್ರೆ ಹಾಕುವಿಕೆ

(b) ಶ್ರೇಣೀಕರಣ

(c) ಸಂವೇಷ್ಟೀಕರಣ

(d) ಗುರುತು ಪಟ್ಟಿ

17. The process which classifies the products on the basis of size, standard and colour is

(a) Branding

(b) Grading

(c) Packing

(d) Labelling



Teachingninja.in

18. "ಎಂಟರ್‌ಪ್ರೀನರ್" ಪದವು ಈ ಕೆಳಗಿನ ಒಂದು ಭಾಷೆಯಿಂದ ಆಯ್ಕೆಗೊಂಡಿದೆ :

(a) ಇಂಗ್ಲೀಷ್

(b) ಲ್ಯಾಟಿನ್

(c) ಗ್ರೀಕ್

(d) ಫ್ರೆಂಚ್

18. The word 'Entrepreneur' is derived from the following language

(a) English

(b) Latin

(c) Greek

(d) French

19. ISI ಯ ವಿಸ್ತೃತ ರೂಪ :

(a) ಇಂಟರ್‌ನ್ಯಾಷನಲ್ ಸ್ಟಾಂಡರ್ಡ್ ಇನ್‌ಸ್ಟಿಟ್ಯೂಶನ್

(b) ಇಂಡಸ್ಟ್ರಿಯಲ್ ಸ್ಟಾಂಡರ್ಡ್ ಇನ್‌ಸ್ಟಿಟ್ಯೂಶನ್

(c) ಇಂಡಿಯನ್ ಸ್ಟಾಂಡರ್ಡ್ ಇನ್‌ಸ್ಟಿಟ್ಯೂಶನ್

(d) ಇನ್‌ಫೋಸಿಸ್ ಸ್ಟಾಂಡರ್ಡ್ ಐಟಂ

19. ISI stands for

(a) International Standard Institution

(b) Industrial Standard Institution

(c) Indian Standard Institution

(d) Infosys Standard Item

20. "ಸರಕು ಮತ್ತು ಸೇವೆಗಳ ವಿತರಣೆಯನ್ನು ಹೀಗೆಂದು ಕರೆಯುವರು :

(a) ಉತ್ಪಾದನೆ

(b) ಅನುಭೋಗ

(c) ವಿನಿಮಯ

(d) ಮೇಲಿನ ಯಾವುದೂ ಅಲ್ಲ

20. The distribution of goods and services is called

(a) Production

(b) Consumption

(c) Exchange

(d) None of the above



Teachingninja.in

21. ಇವುಗಳಲ್ಲಿ ಲೇವಾದೇವಿ ವ್ಯಾಪಾರಿಯು ಯಾವುದಕ್ಕೆ ಉದಾಹರಣೆಯಾಗಿದೆ?
(a) ಸಾಂಸ್ಥಿಕವಲ್ಲದ ಪತ್ತಿನ ಮೂಲ
(b) ಸಾಂಸ್ಥಿಕ ಪತ್ತಿನ ಮೂಲ
(c) ಬ್ಯಾಂಕು
(d) ಭಾರತೀಯ ರಿಸರ್ವ್ ಬ್ಯಾಂಕು

21. Money lender is an example of
(a) Non-institutional credit
(b) Institutional credit
(c) Banks
(d) Reserve Bank of India

22. START up ಯೋಜನೆಯು ಈ ಕೆಳಗಿನ ಯಾವುದನ್ನು ಬೆಂಬಲಿಸುತ್ತದೆ?
(a) ಶಿಕ್ಷಣ
(b) ಆರೋಗ್ಯ
(c) ವ್ಯವಹಾರ
(d) ಕೃಷಿ

22. START up scheme supports
(a) Education
(b) Health
(c) Business
(d) Agriculture

23. ಈ ಕೆಳಗಿನವುಗಳಲ್ಲಿ ಯಾವುದು ಜೈವಿಕ ಸಂಪನ್ಮೂಲದ ಉದಾಹರಣೆಯಲ್ಲ?
(a) ಮಾನವರು
(b) ಬಂಡೆಗಳು
(c) ಜಾನುವಾರು
(d) ಜಲಚರ ಪ್ರಾಣಿಗಳು

23. Which one of the following is not an example of biotic resources?
(a) Human beings
(b) Rocks
(c) Livestock
(d) Acquatic animals

24. MGNREGA ಕಾಯ್ದೆಯಡಿ ಎಷ್ಟು ದಿನಗಳ ಉದ್ಯೋಗ ಭರವಸೆಯನ್ನು ಒದಗಿಸಲಾಗಿದೆ?
(a) 125
(b) 365
(c) 200
(d) 100

24. For how many days employment assurance has been provided under MGNREGA ACT
(a) 125
(b) 365
(c) 200
(d) 100

25. ಈ ಕೆಳಗಿನ ವಿಷಯವು ಸೂಕ್ಷ್ಮ ಅರ್ಥಶಾಸ್ತ್ರದ ಅಧ್ಯಯನವಾಗಿದೆ :
(a) ಒಬ್ಬ ಅನುಭೋಗಿ
(b) ರಾಷ್ಟ್ರೀಯ ಆದಾಯ
(c) ಕೋಶೀಯ ನೀತಿ
(d) ಮೇಲಿನ ಯಾವುದೂ ಅಲ್ಲ

25. Micro economics is the study of
(a) A consumer
(b) National income
(c) Fiscal policy
(d) None of the above


Teachingninja.in

26. ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದವರು:
(a) ಆ್ಯನಿ ಬೆಸೆಂಟ್
(b) ಸತ್ಯಪ್ರಕಾಶ
(c) ದಯಾನಂದ ಸರಸ್ವತಿ
(d) ಜ್ಯೋತಿಬಾ ಪುಲೆ

26. Satyashodaka Samaja was founded by
(a) Annie Besant
(b) Satyaprakasha
(c) Dayananda Saraswati
(d) Jyotiba Phule

27. 1858 ರ ಮಹಾರಾಣಿ ಘೋಷಣೆಯು ಇದನ್ನು ಒಳಗೊಂಡಿರಲಿಲ್ಲ :
(a) ಮತ್ಯಾವುದೇ ಭಾರತೀಯ ರಾಜ್ಯಗಳನ್ನು ಆಕ್ರಮಿಸುವುದಿಲ್ಲ
(b) ಧಾರ್ಮಿಕ ವಿಷಯಗಳಲ್ಲಿ ಬ್ರಿಟಿಷ್ ಸರಕಾರವು ಮಧ್ಯ ಪ್ರವೇಶಿಸುವುದಿಲ್ಲ
(c) ದತ್ತು ಪಡೆಯುವ ಹಕ್ಕನ್ನು ಕೊಡಲಾಗುವುದು
(d) ಭಾರತೀಯರು ಬ್ರಿಟಿಷರ ಆಡಳಿತದಲ್ಲಿ ಭಾಗವಹಿಸುವಂತೆ ಒತ್ತಾಯಿಸಲ್ಪಟ್ಟರು

27. Queens proclamation of 1858 did not include
(a) No more Indian state will be annexed
(b) British government will not interfere in the religious matter
(c) Right to adoption is restored
(d) Indians were compelled to participate in English administration

28. ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಜರುಗಿದ್ದು :
(a) ಮೈಸೂರು
(b) ಬೆಂಗಳೂರು
(c) ದಾವಣಗೆರೆ
(d) ಬೆಳಗಾವಿ

28. The only Indian National Congress session presided by Gandhiji was at
(a) Mysore
(b) Bengaluru
(c) Davanagere
(d) Belagavi


Teachingninja.in

29. ಮೆನ್ಶೇವಿಕರು ವಿಜಯ ಸಾಧಿಸಿದ ನಂತರ ರಷ್ಯಾದೇಶವನ್ನು ಹೀಗೆ ಘೋಷಿಸಿದರು :

(a) ಕಮ್ಯುನಿಸ್ಟ್ ರಾಜ್ಯ

(b) ಜಾತ್ಯತೀತ ರಾಜ್ಯ

(c) ಯು.ಎಸ್.ಎಸ್.ಆರ್.

(d) ಪ್ರಜಾಪ್ರಭುತ್ವವಾದಿ ಗಣರಾಜ್ಯ

29. The Menseviks after their victory declared Russia as

(a) Communist state

(b) Secular state

(c) USSR

(d) Democratic Republic

30. ಸಿಂಧೂನದಿ ಕಣಿವೆಯ ನಾಗರಿಕತೆ ಮತ್ತು ಮೆಸೊಪೊಟೇಮಿಯಾ ನಾಗರಿಕತೆಗಳ ನಡುವಿನ ಸಂಬಂಧಗಳನ್ನು ದೃಢೀಕರಿಸಿದ ಅಂಶ :

(a) ಮೆಸೊಪೊಟೇಮಿಯಾದಲ್ಲಿ ದೊರೆತ ಸಿಂಧೂ ನಾಗರಿಕತೆಯ ನಾಣ್ಯಗಳು

(b) ಮೆಸೊಪೊಟೇಮಿಯಾದಲ್ಲಿ ದೊರೆತ ಸಿಂಧೂ ನಾಗರಿಕತೆಯ ಮುದ್ರೆಗಳು

(c) ಸಿಂಧೂ ನಾಗರಿಕತೆಯಲ್ಲಿ ದೊರೆತ ಮೆಸೊಪೊಟೇಮಿಯಾದ ನಾಣ್ಯಗಳು

(d) ಸಿಂಧೂ ನಾಗರಿಕತೆಯಲ್ಲಿ ದೊರೆತ ಮೆಸೊಪೊಟೇಮಿಯಾದ ಮುದ್ರೆಗಳು

30. The Relations between Indus Valley Civilization and Mesopotamian civilization is proved by

(a) Indus valley coins found in Mesopotamia

(b) Indus valley seals found in Mesopotamia

(c) Mesopotamian coins found in Indus valley civilization

(d) Mesopotamian seals found in Indus valley civilization



Teachingninja.in

31. ಕಾಳಿದಾಸನ ಈ ಕೆಳಗಿನ ಕೃತಿಗಳಲ್ಲಿ ಯಾವುದು ಮಹಾಕಾವ್ಯ?

(a) ಋತುಸಂಹಾರ

(b) ಮೇಘದೂತ

(c) ಶಕುಂತಳಾ

(d) ಕುಮಾರಸಂಭವ

31. Which among the following works of Kalidasa is an epic?

(a) Ritu-Samhara

(b) Meghadoota

(c) Shakuntala

(d) Kumarasambhava

32. ಉಡುಪಿಯಲ್ಲಿ ಮಧ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟಿರುವ ಕೃಷ್ಣನ ವಿಗ್ರಹವು ಈ ಸ್ಥಳದಿಂದ ತರಲ್ಪಟ್ಟಿದೆ ಎಂದು ನಂಬಲಾಗಿದೆ :

(a) ಹರಿದ್ವಾರ

(b) ಮಹಾಬಲಿಪುರಂ

(c) ಕಲ್ಯಾಣ

(d) ಗೋಪಿಚಂದನ

32. The idol of Krishna installed in Udupi by Madhwacharya is believed to be brought from

(a) Haridwara

(b) Mahabalipuram

(c) Kalyana

(d) Gopichandana

33. ಕೆಳಗಿನ ಸಂತತಿಗಳನ್ನು ಕಾಲಾನುಕ್ರಮಣಿಕೆ ಪ್ರಕಾರ ಹೊಂದಿಸಿರಿ :

1. ಸಯ್ಯದ್
2. ತುಘಲಕ್
3. ಖಿಲ್ಜಿ
4. ಗುಲಾಮಿ

(a) 4, 3, 2, 1
(b) 1, 2, 3, 4
(c) 2, 3, 4, 1
(d) 3, 4, 1, 2

33. Arrange the following dynasties in chronological order

1. Sayyed
2. Tughaluq
3. Khilji
4. Slaves

(a) 4, 3, 2, 1
(b) 1, 2, 3, 4
(c) 2, 3, 4, 1
(d) 3, 4, 1, 2

34. ಎರಡನೆಯ ದೇವರಾಯನ (ಪ್ರೌಢದೇವರಾಯ) ಶೂರ ದಂಡನಾಯಕನಾಗಿದ್ದವನು :

(a) ಬಂಕೇಶ

(b) ದಂಡೇಶ

(c) ರವಿಕೀರ್ತಿ

(d) ಕೀರ್ತಿವರ್ಮ

34. The brave commander of Devaraya II (Prouda devaraya) was

(a) Bankesh

(b) Dandesh

(c) Ravikirti

(d) Keertivarma



Teachingninja.in

35. ಮರಾಠಾ ಒಕ್ಕೂಟದ ಮುಖ್ಯಸ್ಥರು ಯಾರಾಗಿದ್ದರು?

(a) ಮಹಾರಾಜ

(b) ಪೇಶ್ವ

(c) ಹೋಳ್ಕರ್

(d) ಗಾಯಕ್‌ವಾಡ

35. Who was head of Maratha confederation or union?

(a) Maharaja

(b) Peshwa

(c) Holkar

(d) Gaikwad

36. ಕಪ್ಪು ಕೋಣೆಯ ದುರಂತದ ಬಗ್ಗೆ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿಲ್ಲ?

(a) ಸಿರಾಜ್-ಉದ್-ದೌಲನು 146 ಬ್ರಿಟಿಷರನ್ನು ಸೆರೆಮನೆಗೆ ಹಾಕಿದನು

(b) ಸೆರೆವಾಸಿಗಳಿಗೆ ಸಾಕಷ್ಟು ಆಹಾರ ಹಾಗೂ ನೀರನ್ನು ಒದಗಿಸದೇ ಇದ್ದ ಕಾರಣ 123 ಸೆರೆವಾಸಿಗಳು ಮೃತರಾದರು

(c) ಬ್ರಿಟಿಷ್ ಸೆರೆವಾಸಿಗಳನ್ನು ಚಿಕ್ಕ ಕೋಣೆಯೊಂದರಲ್ಲಿ ಬಂಧಿಸಿಟ್ಟಿದ್ದರಿಂದ ಉಸಿರುಗಟ್ಟಿ 123 ಜನರೂ ಸತ್ತು ಹೋದರು

(d) ಕಪ್ಪು ಕೋಣೆ ದುರಂತವು ಕಾಲ್ಪನಿಕ ಘಟನೆಯೆಂದು ಕೆಲವು ಇತಿಹಾಸಕಾರರು ನಂಬುತ್ತಾರೆ

36. Which of the following is not correct regarding the Black Hole tragedy?

(a) Siraj-ud-daula imprisioned 146 Britishers

(b) The Prisioners were not provided sufficient food and water resulting in the death of 123 prisioners

(c) The British Prisioners were held in a small cell and 123 prisioners died of suffocation

(d) Some historians believe that the Black hole tragedy is a fiction



Teachingninja.in

37. ವಿಲಿಯಂ ಜೋನ್ಸ್ ಸ್ಥಾಪಿಸಿದ್ದು :

(a) ಏಷಿಯಾಟಿಕ್ ಸೊಸೈಟಿ

(b) ಕರ್ನಾಟಿಕ್ ಸೊಸೈಟಿ

(c) ಜ್ಯೂಡಿಶಿಯಲ್ ಸೊಸೈಟಿ ಆಫ್ ಇಂಡಿಯಾ

(d) ಹ್ಯುಮನ್ ರೈಟ್ಸ್ ಸೊಸೈಟಿ ಆಫ್ ಇಂಡಿಯಾ

37. William Jones established

(a) Asiatic society

(b) Carnatic society

(c) Judicial society of India

(d) Human Rights society of India

38. ಯಾವ ನದಿಯು ಮಾಳ್ವಾ ಪ್ರಸ್ಥಭೂಮಿಯನ್ನು ದಖ್ಖನ್ ಪ್ರಸ್ಥಭೂಮಿಯಿಂದ ಬೇರ್ಪಡಿಸುತ್ತದೆ?

(a) ನರ್ಮದಾ

(b) ಕೃಷ್ಣಾ

(c) ಗೋದಾವರಿ

(d) ಗಾಯತ್ರಿ

38. Which river separates Malwa plateau from the Deccan plateau

(a) Narmada

(b) Krishna

(c) Godavari

(d) Gayatri

39. ವೇದಕಾಲದಲ್ಲಿ "ಕ್ಷೇತ್ರ" ಎಂದರೆ :

(a) ನಿರ್ದಿಷ್ಟ ಅಳತೆಯ ಭೂಮಿ

(b) ತುಂಡು ಭೂಮಿ

(c) ಸಾಗುವಳಿ ಭೂಮಿ

(d) ಸಾಗುವಳಿಯಾಗದ ಭೂಮಿ

39. During the Vedic period 'Kshetra' meant

(a) Particular measurement of land

(b) A piece of land

(c) Cultivated land

(d) Uncultivated land

40. ಗೌತಮ ಬುದ್ಧನು ಬೋಧಿಸಿದ್ದು :

(a) ಸಂಸ್ಕೃತದಲ್ಲಿ

(b) ಪಾಲಿಯಲ್ಲಿ

(c) ಖರೋಷ್ಠಿಯಲ್ಲಿ

(d) ಯವನದಲ್ಲಿ

40. Gautama Buddha preached in

(a) Sanskrita

(b) Pali

(c) Kharosti

(d) Yavana



Teachingninja.in

41. ಭಾರತ ಮತ್ತು ಚೀನಾ ನಡುವೆ ಪಂಚಶೀಲ ತತ್ವಗಳ ಒಪ್ಪಂದ ಆಗಿದ್ದು :

(a) 1950
(b) 1951
(c) 1952
(d) 1954

41. The Panchasheela principles between India and China was signed in the year

(a) 1950
(b) 1951
(c) 1952
(d) 1954

42. ಭಾರತದ ರಾಷ್ಟ್ರಪತಿಯನ್ನು ಆಯ್ಕೆ ಮಾಡುವವರು :

(a) ಚುನಾಯಿತ ಲೋಕಸಭಾ ಸದಸ್ಯರು
(b) ಚುನಾಯಿತ ರಾಜ್ಯಸಭಾ ಸದಸ್ಯರು
(c) ಎಲ್ಲಾ ರಾಜ್ಯಗಳ ರಾಜ್ಯಸಭಾ ಸದಸ್ಯರು
(d) ಮೇಲಿನ ಎಲ್ಲವೂ

42. The President of India is elected by

(a) Elected Members of Lok Sabha
(b) Elected Members of Rajya Sabha
(c) Elected Members of all the State Assemblies
(d) All of the above

43. ಪಂಚಾಯತ್ ಸಂಸ್ಥೆಗಳ ಆದಾಯ ಮೂಲಗಳು :

(a) ಮನೆ, ಮಾರುಕಟ್ಟೆ ಸ್ಥಳಗಳು ಮುಂತಾದವುಗಳ ಮೇಲೆ ಸಂಗ್ರಹಿಸುವ ತೆರಿಗೆ
(b) ಸರ್ಕಾರಿ ನೌಕರರಿಂದ ಸಂಗ್ರಹಿಸುವ ತೆರಿಗೆ
(c) ಕೇಂದ್ರ ಸರ್ಕಾರದ ತೆರಿಗೆ ಮತ್ತು ಸುಂಕಗಳು
(d) ಸರ್ಕಾರೇತರ ಸಂಸ್ಥೆಗಳಿಂದ ಸಂಗ್ರಹಿಸುವ ವಂತಿಗೆ

43. Sources of funds for the panchayats

(a) Collection of taxes on houses, market places etc.
(b) Collection of taxes from govt. employees
(c) Central customs and duties
(d) Collection of donations from NGO's



Teachingninja.in

44. ಭಾರತ ಸಂವಿಧಾನ ರಚನಾ ಸಭೆಯ ಅಧ್ಯಕ್ಷರು :
(a) ಡಾ. ಬಿ.ಆರ್. ಅಂಬೇಡ್ಕರ್
(b) ಜವಾಹರಲಾಲ್ ನೆಹರೂ
(c) ಕೆ.ಎಂ. ಮುಂಶಿ
(d) ಡಾ. ರಾಜೇಂದ್ರ ಪ್ರಸಾದ್

44. The Chairman of the Constituent Assembly of India
(a) Dr. B.R. Ambedkar
(b) Jawaharlal Nehru
(c) K.M. Munshi
(d) Dr. Rajendra Prasad

45. ಸಂವಿಧಾನದ ತಿದ್ದುಪಡಿ ಮಸೂದೆಯನ್ನು ಮೊದಲು ಇಲ್ಲಿ ಮಂಡಿಸಲಾಗುವುದು :
(a) ಲೋಕಸಭೆ
(b) ರಾಜ್ಯಸಭೆ
(c) ಯಾವುದೇ ಸದನದಲ್ಲಿ
(d) ಮೇಲಿನ ಯಾವುದೂ ಅಲ್ಲ

45. The Amendment Bill of the constitution can be presented first in
(a) Lok Sabha
(b) Rajya Sabha
(c) Either House
(d) None of the above

46. ಭಾರತದ ಮುಖ್ಯ ನ್ಯಾಯಾಧೀಶರ ನಿವೃತ್ತಿ ವಯಸ್ಸು :
(a) 60 ವರ್ಷಗಳು
(b) 62 ವರ್ಷಗಳು
(c) 64 ವರ್ಷಗಳು
(d) 65 ವರ್ಷಗಳು

46. The retirement age of the chief Justice of India
(a) 60 years
(b) 62 years
(c) 64 years
(d) 65 years

47. ಯಾವುದೇ ಧಾರ್ಮಿಕ ಬದ್ಧತೆಯುಳ್ಳ ಉಡುಪನ್ನು ವಿದ್ಯಾರ್ಥಿಗಳು ಧರಿಸುವುದನ್ನು ನಿಷೇಧಿಸಿ ಫ್ರಾನ್ಸ್ ಕಾನೂನು ಮಾಡಿದ್ದು :
(a) ಫೆಬ್ರವರಿ 2004 ರಲ್ಲಿ
(b) ಮಾರ್ಚ್ 2004 ರಲ್ಲಿ
(c) ಏಪ್ರಿಲ್ 2004 ರಲ್ಲಿ
(d) ಮೇ 2004 ರಲ್ಲಿ

47. France passed a law banning students from wearing any conspicuous religious dress on
(a) February 2004
(b) March 2004
(c) April 2004
(d) May 2004


Teachingninja.in

48. ಈ ಕೆಳಗಿನವುಗಳಲ್ಲಿ ಯಾವುದು ಅಖಿಲ ಭಾರತೀಯ ಸೇವೆಯಾಗಿದೆ?

(a) ಭಾರತೀಯ ಅಂಚೆ ಸೇವೆ

(b) ಭಾರತೀಯ ಆಡಳಿತ ಸೇವೆ

(c) ಭಾರತೀಯ ಕಂದಾಯ ಸೇವೆ

(d) ಭಾರತೀಯ ವಿದೇಶೀ ಸೇವೆ

48. Which among the following is All India Services?

(a) Indian Postal Services

(b) Indian Administrative Services

(c) Indian Revenue Services

(d) Indian Foreign Services

49. ಭಾರತ ಸಂವಿಧಾನದಲ್ಲಿ ಎಷ್ಟು ಭಾಷೆಗಳಿಗೆ ಅಧಿಕೃತ ಭಾಷಾ ಸ್ಥಾನಮಾನ ನೀಡಲಾಗಿದೆ?

(a) 20

(b) 21

(c) 24

(d) 23

49. How many languages have been given official status in the Constitution of India?

(a) 20

(b) 21

(c) 24

(d) 23

50. ಈ ಕೆಳಕಂಡ ಯಾವ ಪ್ರಾತಿನಿಧಿಕ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಒದಗಿಸಲಾಗಿದೆ?

(a) ಲೋಕಸಭೆ

(b) ರಾಜ್ಯ ವಿಧಾನಸಭೆ

(c) ಕ್ಯಾಬಿನೆಟ್

(d) ಪಂಚಾಯತ್ ರಾಜ್ ಘಟಕಗಳು

50. In which among the following representative bodies, provided reservation for women

(a) Lok Sabha

(b) State Legislative Assembly

(c) Cabinet

(d) Panchayat Raj Bodies



Teachingninja.in

ಈ ಕೆಳಕಂಡ ಪ್ರಶ್ನೆಗಳಿಗೆ 3 ರಿಂದ 5 ವಾಕ್ಯಗಳಲ್ಲಿ ಉತ್ತರಿಸಿರಿ.
ಪ್ರಶ್ನೆಸಂಖ್ಯೆ 51 ರಿಂದ 73 ರವರೆಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 2 ಅಂಕಗಳು.

**Answer the following questions in 3 to 5 sentences each.**
**Question Number 51 to 73 carry 2 marks each.**

**51.** ಶಿಲಾಗೋಳ ಎಂದರೇನು? ಭೂಮಿಯ ಅಂತರಾಳದ ಮೂರು ಪದರುಗಳನ್ನು ತಿಳಿಸಿ.
What is Lithosphere? Mention the three layers of interior of the Earth.

**52.** ಕರ್ನಾಟಕದ ಕರಾವಳಿ ಮೈದಾನದ ಯಾವುದಾದರೂ ನಾಲ್ಕು ಲಕ್ಷಣಗಳನ್ನು ಬರೆಯಿರಿ.
Write any four important features of coastal plains of Karnataka.

**53.** ಯುರೋಪಿನ ನಾಲ್ಕು ಭೌತಿಕ ವಿಭಾಗಗಳನ್ನು ತಿಳಿಸಿ.
Mention the four physical division's of Europe.

**54.** ಜನ ಸಾಂದ್ರತೆಯನ್ನು ಅರ್ಥೈಸಿ, ಭಾರತದ ಜನಸಾಂದ್ರತೆಯ ವಲಯಗಳನ್ನು ತಿಳಿಸಿ.
Define density of population. Mention the important density zones of India.

**55.** ಭೂಕುಸಿತ ಎಂದರೇನು? ಭೂಕುಸಿತಗಳಿಗೆ ಯಾವುದಾದರೂ ನಾಲ್ಕು ಕಾರಣಗಳನ್ನು ತಿಳಿಸಿ.
What is Land slide? Mention any four causes for landslides.

**56.** ವ್ಯವಹಾರದ ವಿಕಸನ ಮತ್ತು ಬೆಳವಣಿಗೆಯಲ್ಲಿನ ಪಟ್ಟಣಗಳ ಆರ್ಥಿಕತೆಯ ಹಂತವು ಹೇಗೆ ರೂಪುಗೊಂಡಿತು?
How town economy stage formed in evolution and growth of commerce?

**57.** ಒಬ್ಬ ಉದ್ಯಮಿಗೆ ಇರಬೇಕಾದ ಕನಿಷ್ಟ ಗುಣಲಕ್ಷಣಗಳಾವುವು?
What are the minimum characteristics required for an entrepreneur?

**58.** ಸಣ್ಣ ಕೈಗಾರಿಕೆ (ಸಣ್ಣ ವ್ಯವಹಾರದ ಸಂಸ್ಥೆ) ಎಂದರೇನು? ನಾಲ್ಕು ಉದಾಹರಣೆ ನೀಡಿ.
What is small scale industry (Business organisation)? Give four examples.



Teachingninja.in

59. ಗುಣಮಟ್ಟ ಮತ್ತು ಶ್ರೇಣೀಕರಣದ ಅರ್ಥ ಬರೆಯಿರಿ.

Write the meaning of standardisation and grading.

60. ಯಾವುದಾದರೂ ಎರಡು ಗ್ರಾಹಕ–ಹಕ್ಕುಗಳನ್ನು ಬರೆಯಿರಿ.

Write any two consumer rights.

61. ಮಾನವ ಸಂಪನ್ಮೂಲವು ಇತರೆ ಸಂಪನ್ಮೂಲಗಳಿಂದ ಭೂಮಿ ಮತ್ತು ಭೌತಿಕ ಬಂಡವಾಳಗಳಿಂದ ಹೇಗೆ ಭಿನ್ನವಾಗಿದೆ?

How is human resource different from other resources like land and physical capital?

62. ಭಾರತದಲ್ಲಿ ಜಾರಿಗೊಳಿಸಲಾದ ಸ್ವ–ಉದ್ಯೋಗದ ಕಾರ್ಯಕ್ರಮಗಳಾವುವು?

What are the self employment programmes initiated in India?

63. ಮರೆಮಾಚಿದ ನಿರುದ್ಯೋಗದ ಅರ್ಥ ತಿಳಿಸಿ.

Give the meaning of disguised unemployment.

64. ಹಮ್ಮುರಾಬಿಯ ಕಾನೂನು ಸಂಹಿತೆಯ ಮಹತ್ವವನ್ನು ತಿಳಿಸಿ.

Bring out the significance of Hammurabi's code.

65. ಅಶೋಕನ ಜೀವನದಲ್ಲಿ ಕಳಿಂಗ ಯುದ್ಧದ ಮಹತ್ವವೇನು?

What is significance of Kalinga war in the life of Ashoka?



Teachingninja.in

66. ಭಕ್ತಿ ಸಾಹಿತ್ಯಕ್ಕೆ ಮೀರಾ ಬಾಯಿಯ ಕೊಡುಗೆ ಏನು?

What are the contributions of Mira Bai to Bhakti literature?

67. ಯಾವುದಾದರೂ ನಾಲ್ಕು ಷಾಹಿ ಸುಲ್ತಾನರನ್ನು ಹೆಸರಿಸಿರಿ ಮತ್ತು ಅವರ ರಾಜಧಾನಿಗಳನ್ನು ಬರೆಯಿರಿ.

Mention any four Shahi Kingdoms and their capitals.

68. ಗೋಕಾಕ ಚಳುವಳಿ ಎಂದರೇನು?

What is Gokak movement?

69. ಜಾತ್ಯತೀತತೆ (ಮತನಿರಪೇಕ್ಷತೆ) ಎಂದರೇನು?

What is meant by Secularism?

70. ರಾಷ್ಟ್ರಪತಿಯವರ ಮಿಲಿಟರಿ ಅಧಿಕಾರಗಳು ಯಾವುವು?

What are the military powers of the President?

71. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ತಿಳಿಸಿ.

Mention the functions of Union Public Service Commission.

72. ನಮ್ಮ ರಾಷ್ಟ್ರಧ್ವಜದ ವಿಶೇಷತೆಯನ್ನು ಬರೆಯಿರಿ.

Write the uniqueness of our National Flag.

73. ಧಾರ್ಮಿಕ ಐಕ್ಯತೆ ಎಂದರೇನು?

What is Religious unity?



Teachingninja.in

ಈ ಕೆಳಕಂಡ ಪ್ರಶ್ನೆಗಳಿಗೆ 6 ರಿಂದ 8 ವಾಕ್ಯಗಳಲ್ಲಿ ಉತ್ತರಿಸಿರಿ.
ಪ್ರಶ್ನೆಸಂಖ್ಯೆ 74 ರಿಂದ 91 ರವರೆಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 3 ಅಂಕಗಳು.

**Answer the following questions in 6 to 8 sentences each.**
**Question Number 74 to 91 carry 3 marks each.**

74. ರೇಖಾಂಶಗಳು ಎಂದರೇನು? ಗ್ಲೋಬ್‌ನ ಮೇಲಿರುವ ಮೂರು ಮುಖ್ಯ ರೇಖಾಂಶಗಳನ್ನು ಹೆಸರಿಸಿ.
What are longitudes? Name the three important longitudes on the Globe.

75. ಸುವರ್ಣ ಚತುಷ್ಪಥ ರಸ್ತೆಯ ಮಹತ್ವವನ್ನು ತಿಳಿಸಿ.
State the importance of Golden quadrilateral road.

76. ಮುಂಬೈಯನ್ನು "ಭಾರತದ ಮ್ಯಾಂಚೆಸ್ಟರ್" ಎಂದು ಏಕೆ ಕರೆಯುತ್ತಾರೆ?
Why Mumbai is called "Manchester of India"?

77. ಕರ್ನಾಟಕ ವನ್ಯಜೀವಿ ಧಾಮಗಳ ಮಹತ್ವವನ್ನು ಬರೆಯಿರಿ.
Write the importance of Wild Life Sanctuaries of Karnataka.

78. ನಿತ್ಯಹರಿದ್ವರ್ಣ ಕಾಡುಗಳು ಎಂದರೇನು? ಯಾವುದಾದರೂ ಎರಡು ನಿತ್ಯಹರಿದ್ವರ್ಣ ಕಾಡುಗಳನ್ನು ಹೆಸರಿಸಿರಿ.
What are Evergreen forests? Name any two regions of ever green forests.

79. ಆರ್ಥಿಕ ಅಭಿವೃದ್ಧಿಯಲ್ಲಿ ವ್ಯವಹಾರ ಮತ್ತು ವಾಣಿಜ್ಯದ ಪಾತ್ರವನ್ನು ವಿವರಿಸಿರಿ.
Explain the role of Business and commerce in economic development.

80. ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣಗಳ ಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
Briefly explain the measures of liberalisation, globalisation and privatisation.

81. ಕಲ್ಯಾಣ ರಾಜ್ಯಗಳಲ್ಲಿ ಸರ್ಕಾರಗಳ ಕಾರ್ಯಕ್ಷೇತ್ರವನ್ನು ಕುರಿತು ಟಿಪ್ಪಣಿ ಬರೆಯಿರಿ.
Write a note on jurisdiction of the Government in Welfare States.

82. ಕ್ರೈಸ್ತ ಧರ್ಮದ ಪ್ರಸಾರಕ್ಕೆ ಕಾರಣವಾದ ಅಂಶಗಳನ್ನು ಪಟ್ಟಿಮಾಡಿರಿ.
List out the factors responsible for the spread of Christianity.



teachingninja.in
Teachingninja.in

83. ರಾಬರ್ಟ್ ಕ್ಲೈವ್‌ನು ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಡಿಪಾಯ ಹಾಕಿದನು. ವಿವರಿಸಿರಿ.

Robert Clive laid the foundation of British empire in India. Explain.

84. ಭೌಗೋಳಿಕ ಅನ್ವೇಷಣೆಗಳನ್ನು ಪ್ರೋತ್ಸಾಹಿಸುವಲ್ಲಿ ರಾಜಕುಮಾರ (ನಾವಿಕ) ಹೆನ್ರಿಯ ಪಾತ್ರವನ್ನು ಕುರಿತು ಬರೆಯಿರಿ.

Write the role of 'Henry the Navigator' in encouraging geographical discoveries.

85. ಅಕ್ಬರನ ಆಸ್ಥಾನದಲ್ಲಿದ್ದ "ನವರತ್ನ"ರನ್ನು ಕುರಿತು ಬರೆಯಿರಿ.

Write about the 'Navaratnas' of Akbar's court.

86. ಫ್ರೆಂಚ್ ಕ್ರಾಂತಿಯಲ್ಲಿ ತತ್ವಜ್ಞಾನಿಗಳ ಪಾತ್ರವನ್ನು ಕುರಿತು ಬರೆಯಿರಿ.

Bring out the role of philosophers in French Revolution.

87. ಸಾರ್ವಭೌಮ ರಾಷ್ಟ್ರ ಎಂದರೇನು?

What is meant by sovereign state?

88. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಪದಚ್ಯುತಗೊಳಿಸುವ ವಿಧಾನವನ್ನು ವಿವರಿಸಿರಿ.

Explain the procedure of impeachment of supreme court judges.

89. ನಾಗರಿಕ ರಕ್ಷಣೆಯನ್ನು ಕುರಿತು ಬರೆಯಿರಿ.

Write about the civil defence.

90. ಪೌರತ್ವವನ್ನು ಕಳೆದುಕೊಳ್ಳುವ ವಿಧಾನಗಳನ್ನು ವಿವರಿಸಿರಿ.

Explain the methods of loosing citizenship.

91. ವಿಶ್ವಸಂಸ್ಥೆಯ ಅಂಗಸಂಸ್ಥೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

Briefly explain the organs of UNO.

---



Teachingninja.in